ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

ಚುಕ್ಕೆ ರಹಿತ ಪ್ರಶ್ನೆ

ದಿನಾಂಕ : 25-03-2021 ಪ್ರಶ್ನೆ ಸಂಖ್ಯೆ : 1874 (2167)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು)

ಉತ್ತರ ನೀಡಬೇಕಾದ ದಿನಾಂಕ : 25-03-2021

ಉತ್ತರಿಸುವ ಸಚಿವರು: ಮಾನ್ಯ ಮುಖ್ಯಮಂತ್ರಿಗಳು

ವಿಷಯ : ನೂತನ ಸೌರಶಕ್ತಿ ಪಾರ್ಕ್‌ಗಳ ಸ್ಥಾಪನೆ ಬಗ್ಗೆ

(ಅ) ಕೇಂದ್ರ ಸರ್ಕಾರದ ಹೊಸ ಮತ್ತು ನವೀಕರಣ ಇಂಧನ/ವಿದ್ಯುಚ್ಛಕ್ತಿ ಯೋಜನೆ ಅಡಿಯಲ್ಲಿ ರಾಜ್ಯದಲ್ಲಿ Make in India ಯೋಜನೆ ಅಡಿ ಹೊಸದಾಗಿ ಸೌರಶಕ್ತಿ ಪಾರ್ಕ್‌ಗಳನ್ನು ಸ್ಥಾಪಿಸಲು ಗುರುತಿಸಿರುವ ಸ್ಥಳಗಳು ಯಾವುವು; ಈ ಯೋಜನೆಯಲ್ಲಿ ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಮತ್ತು ಉದ್ಯಮಗಳಿಗೆ ದೊರೆಯುವ ಆರ್ಥಿಕ ಮತ್ತು ಇತರೆ ನೆರವುಗಳು ಯಾವುವು; (ಸಂಪೂರ್ಣ ಮಾಹಿತಿ ನೀಡುವುದು)

(ಆ) ಸೌರಶಕ್ತಿ ಪಾರ್ಕ್‌ಗಳ ನಿರ್ಮಾಣ ಮತ್ತು ಸೌರ-ಶಕ್ತಿ ಉತ್ಪಾದನೆ ಬಗ್ಗೆ ರಾಜ್ಯ ಸರ್ಕಾರ ರೂಪಿಸಿರುವ ರೂಪುರೇಷೆಗಳೇನು; (ಸಂಪೂರ್ಣ ವಿವರ ನೀಡುವದು)

(ಇ) ದೇಶದಲ್ಲಿ ಸೌರ-ಶಕ್ತಿ ಉತ್ಪಾದನೆಗೆ ಪ್ರಾಮುಖ್ಯತೆ ನೀಡುತ್ತಿದ್ದು, ಹಾಗೂ ಈ ಸೌರ-ಶಕ್ತಿ ಉತ್ಪಾದನೆ ವೆಚ್ಚ ಅಧಿಕವಾಗಿದ್ದು ಈ ವೆಚ್ಚವನ್ನು ಕಡಿಮೆಗೊಳಿಸಲು ಸೌರ-ಶಕ್ತಿ ಉತ್ಪಾದನೆ, ಸಾಮರ್ಥ್ಯ ಮತ್ತು ಗುಣಮಟ್ಟದ ಬಗ್ಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಂಶೋಧನೆ ಮತ್ತು ಅಭಿವೃದ್ಧಿಗೆ ಅಧ್ಯಯನ ನಡೆಸುತ್ತಿವೆಯೇ; ಇಲ್ಲದಿದ್ದಲ್ಲಿ, ಈ ಬಗ್ಗೆ ಅಗತ್ಯ ಮತ್ತು ತುರ್ತು ಕ್ರಮವನ್ನು ಕೈಗೊಳ್ಳುವುದು ಯಾವಾಗ? (ವಿವರ ನೀಡುವುದು)